ಹಬ್ಬದ ಸಂಭ್ರಮ. ಚಿರತೆಗೂ ಲೆಪರ್ಡ್‌ಗೂ ವ್ಯತ್ಯಾಸವಿದೆ ಎಂಬುದನ್ನು ಶಾಲೆಗಳಲ್ಲೂ ಹೇಳಿಕೊಡುವುದಿಲ್ಲ. ಹುತ್ತಕಟ್ಟುವ ಅನೇಕ ಗೆದ್ದಲುಗಳಿಗೆ ದೃಷ್ಟಿಯೇ ಇರುವುದಿಲ್ಲ ಎಂಬುದು ಕೂಡ ಮಕ್ಕಳಿಗೆ ಹೇಳಿಕೊಡುವುದು ಅಪರೂಪ.

ಆಗಾಗ ಭೇಟಿಯಾಗುವ ನನ್ನ ಪರಿಸರ ಮಿತ್ರ ಎಷ್ಟೋ ಬಾರಿ ಹೇಳಿದ್ದಾನೆ. ಇಡೀ ಜೀವಿ ಜಗತ್ತಿನಲ್ಲಿ ಎಲ್ಲ ಜೀವಿಗಳಿಗಿಂತ ಕೀಟಗಳ ಸಂಖ್ಯೆಯೇ ದೊಡ್ಡದು. ಒಟ್ಟು ಅವುಗಳಲ್ಲಿ ಐದೂವರೆ ದಶಲಕ್ಷ ಪ್ರಭೇದಗಳಿವೆಯಂತೆ. ಒಮ್ಮೆ ಹೀಗೆಯೇ ಕೆಫೆಯೊಂದರಲ್ಲಿ ಕುಳಿತು ಹರಟುತ್ತಿದ್ದಾಗ, ಅವನ ಬಿಸಿಬಿಸಿ ಕಾಫಿ ಲೋಟಕ್ಕೆ ಸೊಳ್ಳೆಯೊಂದು ಬಂದು ಆತ್ಮಹತ್ಯೆ ಮಾಡಿಕೊಂಡಿತು. ಕೀಟಲೆ ಮಾಡಬೇಕೆಂದು 'ಈ ಸೊಳ್ಳೆಯೂ ನಿನ್ನ ಲೆಕ್ಕಕ್ಕೆ ಸೇರಿದೆಯ?' ಎಂದು ಕೇಳಿದಾಗ ಅವನು ನಕ್ಕುಬಿಟ್ಟ. 'ಅಯ್ಯಾ, ವಿಜ್ಞಾನದಲ್ಲಿ ಜಾತಿಗೂ ಪ್ರಭೇದಕ್ಕೂ ವ್ಯತ್ಯಾಸವಿದೆ. ಹೌದು, ಸೊಳ್ಳೆಯೂ ಕೀಟವೇ' ಎಂದಾಗ, 'ಇಡೀ ಜಗತ್ತಿನಲ್ಲಿ ಎಷ್ಟು ಕೀಟಗಳಿವೆ' ಎಂದು ಕೆಣಕಿದೆ. ಆತ ಕ್ಷಣಮಾತ್ರವೂ ಯೋಚಿಸದೆ ಹೇಳಿದ: 'ಹತ್ತು ಕ್ವಿಂಟಿಲಿಯನ್.' ನನಗೆ ತಲೆ ತಿರುಗಿತು. ಏಕೆಂದರೆ ಈ ಎಣಿಕೆಯಲ್ಲಿ ಮಿಲಿಯನ್, ಬಿಲಿಯನ್, ಟ್ರಿಲಿಯನ್‌ವರೆಗೂ ಹೋಗಬಹುದು. ಆದರಾಚೆಯದು ತಲೆಗೆ ಹತ್ತುವುದಿಲ್ಲ. ಮುಖ ನೋಡಿದೆ. ಅವನಿಗೆ ಗೊತ್ತಾಯಿತು. ಬಿಡಿಸಿ ಹೇಳುತ್ತ 'ಹತ್ತು ಬಿಲಿಯನ್ ಬಿಲಿಯನ್' ಎಂದ. ಮತ್ತೆ ಫಜೀತಿ. ಹೇಳುತ್ತಲೇ ಹೋದ. ಹತ್ತು, 3 ಸೊನ್ನೆ, 3 ಸೊನ್ನೆ, ಸೊನ್ನೆ – ಹೀಗೆ 10ರ ಮುಂದೆ 18 ಸೊನ್ನೆ ಎಂದಾಗ, ಯಾರಪ್ಪಾ ಪುಣ್ಯಾತ್ಮ, ಈ ಲೆಕ್ಕ ಇಟ್ಟವನು ಎಂದುಕೊಂಡೆ. ಅದು ಕೀಟವಿಜ್ಞಾನಿಗಳು ಮಾಡಿದ ಅಂದಾಜಂತೆ. ನಾವು ಅದನ್ನು ನಂಬಬೇಕು. ಏಕೆಂದರೆ ಎಣಿಸುತ್ತ ಕೂಡುವವರು ಯಾರು?

ಮುಂದಿನ ಮಾತು. ನಾವು ಎಂದಾದರೂ ಯೋಚಿಸಿದ್ದೇವೆಯೇ, ಮನುಷ್ಯರಲ್ಲಿ ಎಷ್ಟು ಪ್ರಭೇದಗಳಿರಬಹುದು? ಹೀಗೆಂದೊಡನೆ ನೀವು ಪಟಪಟ ಗುಂಪುಗಳಾಗಿ ವಿಂಗಡಿಸಿ ಯೂರೋಪಿಯನ್, ಆಫ್ರಿಕನ್, ಅಮೆರಿಕನ್, ಏಷ್ಯನ್, ಮಂಗೋಲಿಯನ್ – ಹೀಗೆ ಹೇಳುತ್ತಾ ಹೋಗಬಹುದು. ವಾಸ್ತವವಾಗಿ ಇದು ಪ್ರಭೇದದ ಲೆಕ್ಕಕ್ಕೆ ಬರುವುದಿಲ್ಲ. ಏನಿದ್ದರೂ 'ರೇಸ್' ಎಂಬ ಪದದಡಿ ಇವರನ್ನೆಲ್ಲ ಸೇರಿಸಿಬಿಡುತ್ತೇವೆ. ರೇಸ್ ಎಂದರೆ ಜನಾಂಗ, ಪ್ರಭೇದವಲ್ಲ. ಹಿಟ್ಲರ್ ಹೊಡೆದಾಡಿದ್ದು ಇದೇ ಜನಾಂಗೀಯ ಶ್ರೇಷ್ಠತೆಗಾಗಿ. ಏನಿದ್ದರೂ ಭೌಗೋಳಿಕವಾಗಿ ಭಿನ್ನ ಭಿನ್ನ ಪರಿಸರದಲ್ಲಿ ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡ ಮನುಕುಲವೆಲ್ಲ ಒಂದೇ ಪ್ರಭೇದಕ್ಕೆ ಸೇರಿದ್ದು. ಅಂದರೆ 'ಹೋಮೋಸೇಪಿಯನ್'. ಇನ್ನೂ ಸ್ವಲ್ಪ ವಿಶಾಲಾರ್ಥದಲ್ಲಿ ಯೋಚಿಸಬೇಕೆಂದರೆ, ಅಡಿಗರ ಪದ್ಯದ ಸಾಲನ್ನು ನೆನಪಿಸಿಕೊಳ್ಳಿ: 'ನಾವೆಲ್ಲರು ಒಂದೆ ಜಾತಿ, ಒಂದೆ ಮತ, ಒಂದೆ ಕುಲ; ನಾವು ಮನುಜರು'. ಪಂಪನದೂ ಅದೇ ಉದ್ಘೋಷ: 'ಮನುಷ್ಯ ಜಾತಿ ತಾನೊಂದೆ ವಲಂ.'







ಕಲ್ಪನಾತೀತ ಭೂಮಿಯ ಹುಟ್ಟು

ಬೇರೆ ಜೀವಿಗಳಂತೆ ನಮ್ಮಲ್ಲೇಕೆ ಪ್ರಭೇದಗಳು ಹುಟ್ಟಲಿಲ್ಲ? ಇದಕ್ಕೆ ಇತಿಹಾಸ ಬೆದಕಿದರೆ ಸಾಲದು, ಒಂದಷ್ಟು ಆಂಥ್ರುಪಾಲಜಿ ಪುಟಗಳನ್ನು ತಿರುವಿಹಾಕಬೇಕು. ಮನುಷ್ಯರ ನೆಲೆ, ಕುಲವನ್ನೆಲ್ಲ ಜಾಲಾಡಿದ ತಜ್ಞರು ಭೂಮಿ ಅಡಗಿಸಿಟ್ಟುಕೊಂಡಿರುವ ಮನುಷ್ಯನ ಅವಶೇಷಗಳನ್ನೆಲ್ಲ ಬಗೆದು ಬಗೆದು ಜೋಡಿಸಿ ತೋರಿಸಿದ್ದಾರೆ. 30,000 ವರ್ಷಗಳ ಹಿಂದೆ ಒಂಬತ್ತು ಮನುಷ್ಯ ಪ್ರಭೇದಗಳು ಭೂಮಿಯ ಮೇಲೆ ನಡೆದಾಡಿದ್ದವಂತೆ, ಬಡಿದಾಡಿದ್ದವಂತೆ. ಬಟ್ಟೆ ಬಗ್ಗೆ ಚಿಂತಿಸಿದವರಲ್ಲ, ನಾರುಮುಡಿಯನ್ನೂ ಉಟ್ಟವರಲ್ಲ. ನಗ್ನರು, ಕಾಮಾಪೇಕ್ಷೆ ಕಾಡಿದಾಗಲೆಲ್ಲ ನಿಸ್ಸಂಕೋಚವಾಗಿ ಕೂಡಿಕೊಂಡವರು. ವಂಶವನ್ನು ವೃದ್ಧಿಸಿಕೊಂಡವರು. 28 ಲಕ್ಷ ವರ್ಷಗಳ ಹಿಂದೆ ಇದ್ದ 'ಅಸ್ಟ್ರಲೋಪಿತಿಕಸ್' ಎಂಬ ಮೂಲದಿಂದ ಹೊರಟ ವಂಶಸ್ಥರಿವರು. ಹೋಮೋಹ್ಯಾಬಿಲಸ್,



ನಮ್ಮೆಲ್ಲರ ಮೂಲಪುರುಷ ಆಸ್ಟ್ರಲೋಪಿತಿಕಸ್